ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 9 ಸಂಚಿಕೆ : 1 ಪುಟ : 8 ಮೇ – ಜೂನ್ 2014

# ಸಂಘಟಿತ ಹೋರಾಟದಿಂದಾಗಿ ಹೆಚ್ಚಿದ ಗಾರ್ಮೆಂಟ್ಸ್ ಕಾರ್ಮಿಕರ ಕನಿಷ್ಠ ವೇತನ

*ಆತ್ಮೀಯ ಸಂಗಾತಿಗಳೇ,*

ಇತ್ತೀಚೆಗೆ ತಾನೇ ಮಹಿಳಾ ದಿನವನ್ನು ಆಚರಿಸಿದ ನಿಮಗೆಲ್ಲರಿಗೂ ಮೇ ದಿನದ ಶುಭಾಶಯಗಳು. ಅನಿವಾರ್ಯ ಕಾರಣಗಳಿಂದಾಗಿ **'ಸೂಜಿ–ದಾರ'** ತಡವಾಗಿ ಪ್ರಕಟವಾಗುತ್ತಿದೆ. ಯಾಕೆ ಪತ್ರಿಕೆ ಬಂದಿಲ್ಲ? ಏಕೆ ತಡ ಎಂದು ಕೇಳಿದವರಿಗೆಲ್ಲ, ಇನ್ನು ಮುಂದೆ ಸಮಯಕ್ಕೆ ಸರಿಯಾಗಿ ಹೊರಬರುತ್ತದೆಂದು ಈ ಮೂಲಕ ಬದ್ಧರಾಗುತ್ತಿದ್ದೇವೆ.

ಗಾರ್ಮೆಂಟ್ಸ್ ಕಾರ್ಮಿಕರ ಕನಿಷ್ಠವೇತನವು ಹೆಚ್ಚಾಗಬೇಕೆಂದು GATWU'ವು 2007 ರಿಂದಲೂ ಹೋರಾಟ ನಡೆಸುತ್ತಿದ್ದು, ತಾವೆಲ್ಲರೂ ಈ ಹೋರಾಟದ ಭಾಗವಾಗಿದ್ದೀರಿ. ಕಳೆದ 33 ವರ್ಷಗಳಿಂದ ಕನಿಷ್ಠವೇತನ ಪರಿಷ್ಕರಣೆಯ ಸಂದರ್ಭಗಳಲ್ಲಿ ಮಾಲೀಕವರ್ಗ ಹಾಗೂ ಸರ್ಕಾರಗಳು ಸೇರಿ ಗಾರ್ಮೆಂಟ್ಸ್ ಕಾರ್ಮಿಕರಿಗೆ ವಂಚನೆ ಮಾಡುತ್ತಿದ್ದರೂ, ಕಾರ್ಮಿಕರ ಪರವಾಗಿ ಯಾರೂ ಧ್ವನಿ ಎತ್ತಿರಲಿಲ್ಲ. 2006 ರಿಂದ GATWU ಗಾರ್ಮೆಂಟ್ಸ್ ಕಾರ್ಮಿಕರಿಗಾಗುತ್ತಿರುವ ಈ ಅನ್ಯಾಯದ ಬಗ್ಗೆ ಹೋರಾಟ ನಡೆಸುತ್ತಾ ಬಂದು, ಸರ್ಕಾರದ ಮಟ್ಟದಲ್ಲಿ ಮತ್ತು ನ್ಯಾಯಾಲಯದಲ್ಲಿ ಸಮರ್ಥವಾಗಿ ಕಾರ್ಮಿಕರನ್ನು ಪ್ರತಿನಿಧಿಸಿತು. ಇದರ ಪರಿಣಾಮವಾಗಿ, ಕರ್ನಾಟಕ ಉಚ್ಚ ನ್ಯಾಯಾಲಯವು, ವೇತನ ಪರಿಷ್ಕರಣೆಯಲ್ಲಿ ಕಾರ್ಮಿಕರಿಗಾದ ಅನ್ಯಾಯವನ್ನು ಮನಗಂಡು, ಕಾರ್ಮಿಕರಿಗೆ ನ್ಯಾಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಮಾರ್ಚ್ 2013 ರಲ್ಲಿ ತೀರ್ಪು ನೀಡಿತು. ಈ ತೀರ್ಪಿನ ಪರಿಣಾಮವೇ ಈ ಮೇಲಿನ ವೇತನ ಹೆಚ್ಚಳ!

ಈ ಹಿಂದಿನ ವೇತನ ಪರಿಷ್ಕರಣೆಗಳಲ್ಲಿ ದಿನಕ್ಕೆ. 1 ಅಥವಾ 2 ರೂ. ಮಾತ್ರವೇ ಹೆಚ್ಚಾಗುತ್ತಿತ್ತು, ಅದನ್ನೂ ಸಹ ಕೊಡಲಾಗುವುದಿಲ್ಲ ಎಂದು ಮಾಲೀಕರು ವಿರೋಧಿಸುತ್ತಿದ್ದರು! ಪರಿಣಾಮವಾಗಿ ಕಾರ್ಮಿಕರಿಗೆ ಸಿಗುತ್ತಿದ್ದ ವೇತನ ಅತ್ಯಂತ ಕಡಿಮೆಯೇ ಇತ್ತು. GATWU ವಿನ ಸತತ ಹೋರಾಟದಿಂದ ಇಂದು ಗಾರ್ಮೆಂಟ್ಸ್ ಕಾರ್ಮಿಕರಿಗೆ ಒಂದು ದಿನಕ್ಕೆ ರೂ. 27 ರಷ್ಟು ವೇತನ ಹೆಚ್ಚಳವಾಗಿದೆ. ಕಾರ್ಮಿಕರ ಪ್ರತಿಭಟನೆಗೆ, ಹೋರಾಟಕ್ಕೆ ಎಂತಹ ಶಕ್ತಿ ಇದೆ ಎಂದು ಇದರಿಂದಲೇ ನಾವು ತಿಳಿಯಬಹುದು.

ಈಗ ಹೆಚ್ಚಾಗಿರುವ ವೇತನವೂ ಸಹ ಕಾರ್ಮಿಕರಿಗೆ ಜೀವನ ನಡೆಸಲು ಸಾಲುವುದಿಲ್ಲ, ಸರ್ಕಾರ ನೇಮಿಸಿದ 'ಶಾಂತಪ್ಪ ಸಮಿತಿಯ' ವರದಿಯೂ ಸಹ ಇದನ್ನು ಸಮರ್ಥಿಸುತ್ತದೆ. ಆದರೆ ಹೋರಾಟದ ಮೊದಲ ಹೆಜ್ಜೆಯಾಗಿ, ಇಷ್ಟು ವೇತನ ಪಡೆಯುವಲ್ಲಿ ನಾವು ಯಶಸ್ವಿಯಾಗಿದ್ದೇವೆ, ಮತ್ತು ಬದುಕುವ ವೇತನ ಪಡೆಯುವ ನಮ್ಮ ಮುಂದಿನ ಹೋರಾಟಕ್ಕೆ ಇದು ಸ್ಫೂರ್ತಿಯಾಗಿದೆ. ಎಲ್ಲ ಕಾರ್ಮಿಕರೂ GATWU ವಿಗೆ ಸದಸ್ಯರಾಗುವ ಮೂಲಕ ಹೋರಾಟಕ್ಕೆ ಬೆಂಬಲಿಸಿ, ನಿಮ್ಮ ಬೆಂಬಲವೇ ಸಂಘಟನೆಯ ಬಲ.

**ಗಾರ್ಮೆಂಟ್ಸ್ ಉದ್ಯಮ ಹಾಗೂ ಕಾರ್ಮಿಕರ ಸಮರ್ಥ ಪ್ರತಿನಿಧಿಯಾಗಿ GATWU– ಕೆಲವು ಸಾಧನೆಗಳು / ಮೈಲುಗಲ್ಲುಗಳು (ಪುಟ 4–5)**



# ಮೈಸೂರಿನಲ್ಲಿ ಮೊಳಗಿದ ಮಹಿಳಾ ದೌರ್ಜನ್ಯ ವಿರೋಧೀ ಧ್ವನಿ




ದೆಹಲಿ ಅತ್ಯಾಚಾರ ಪ್ರಕರಣದ ನಂತರ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಅತ್ಯಾಚಾರಗಳ ವಿರುದ್ಧ ಧ್ವನಿಯೆತ್ತಲು ಮತ್ತು ತಡೆಗಟ್ಟುವ ಸಲುವಾಗಿ ರಾಜ್ಯದ ಮಹಿಳಾ ಸಂಘಟನೆಗಳೆಲ್ಲವೂ ಒಗ್ಗೂಡಿ ಒಂದು ಶಕ್ತಿಯಾಗಿ ಕೆಲಸ ಮಾಡಬೇಕೆಂಬ ಉದ್ದೇಶದೊಂದಿಗೆ **ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು** ಜಾರಿಗೆ ಬಂತು. ಸಾಂಘಿಕ, ಪ್ರಜಾಸತ್ತಾತ್ಮಕ ಮತ್ತು ಅಹಿಂಸಾತ್ಮಕ ಹೋರಾಟದಲ್ಲಿ ನಂಬಿಕೆ ಇರಿಸಿರುವ ಹಲವಾರು ಪ್ರಗತಿಪರ, ಜನಪರ, ಸಮಾನತೆ, ಸಹಬಾಳ್ವೆಯನ್ನು ನಂಬುವ ಮಹಿಳಾ ಸಂಘಟನೆಗಳು ಈ ಒಕ್ಕೂಟದಡಿ ಒಟ್ಟಿಗೆ ಬಂದಿವೆ. ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು **GATWU** ಈ ಒಕ್ಕೂಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ.

ಕಳೆದ ವರ್ಷ, 2013 ರಲ್ಲಿ ಮಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಂಗಳೂರಿನ ಮಹಿಳಾ ಸಂಘಟನೆಗಳ ಶ್ರಮ ಹಾಗು ಸಹಯೋಗದೊಂದಿಗೆ ಯಶಸ್ವಿಯಾಗಿ ಆಚರಿಸಲಾಯಿತು. 5000 ಮಹಿಳೆಯರು ಪಾಲ್ಗೊಂಡಿದ್ದ ಆ ಕಾರ್ಯಕ್ರಮಕ್ಕೆ ವಿಶಾಖ ಗೈಡ್‌ಲೈನ್ಸ್ ಮೂಲಕ ಇಂದು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಾಗುವ ಲೈಂಗಿಕ ಕಿರುಕುಳದ ವಿರುದ್ಧದ ಕಾಯಿದೆಗೆ ಕಾರಣರಾದ ಶ್ರೀಮತಿ ಭಾನ್ವರಿ ದೇವಿ ಮುಖ್ಯ ಅತಿಥಿಯಾಗಿ ಬಂದಿದ್ದರು.

2014ರ ಮಾರ್ಚ್ 8 ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮೈಸೂರಿನ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ನಡೆಸಲಾಯಿತು. ಗಡಿ ಪ್ರದೇಶದ ಚಕಮಕಿ ಹಾಗೂ ಅರೆಸೇನಾ ಪಡೆಯ ನಾನಾ ರೀತಿಯ ದೌರ್ಜನ್ಯಗಳಿಗೆ ಈಡಾಗಿರುವ ಮಣಿಪುರದ ಮಹಿಳೆಯರು ತಮ್ಮ ಸಮಾಜ ಹಾಗೂ ಸೇನಾ ವ್ಯವಸ್ಥೆಯ ಪಿತೃಪ್ರಾಧಾನ್ಯವನ್ನು ವಿಶಿಷ್ಟ ರೀತಿಯಲ್ಲಿ ಪ್ರತಿಭಟಿಸುತ್ತಿದ್ದಾರೆ. 2014 ರ ಮಹಿಳಾ ದಿನಾಚರಣೆಯಲ್ಲಿ ಮಣಿಪುರದ ಮಹಿಳಾ ಸಂಘಟನೆಗಳ ಶ್ರೀಮತಿ. ಇಮಾ ಲೌರೆಂಬಂ ನಾನ್ಬಿ ದೇವಿ, ಶ್ರೀಮತಿ ತಕೇಲಂಬಂ ರೇಣು ಬಾಲದೇವಿ ಹಾಗು ಶ್ರೀಮತಿ ಚಿತ್ರಾ ಅಹೆಂತಮ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅರೆಸೇನಾ ಪಡೆಯ ಹಿಂಸೆಯ ವಿರುದ್ಧ ಪ್ರತಿರೋಧ ತೋರಿಸಿದ ಮಣಿಪುರದ ಮಹಿಳೆಯರ ಪ್ರತಿನಿಧಿಗಳಾಗಿ ಈ ಮೂವರು ಕಾರ್ಯಕರ್ತೆಯರು ನಮ್ಮೊಡನಿದ್ದರು.

**ಮಹಿಳಾ ದಿನಾಚರಣೆಯ ಅಂಗವಾಗಿ ನಡೆದ ಕಾರ್ಯಕ್ರಮಗಳು:**

ಮಹಿಳಾ ದಿನಾಚರಣೆಯ ಅಂಗವಾಗಿ ಮಾರ್ಚ್ 7 ರಂದು ಮಹಿಳಾ ದೌರ್ಜನ್ಯ– ಪ್ರತಿರೋಧದ ನೆಲೆಗಳು ಎಂಬ ವಿಚಾರವಾಗಿ ಕುವೆಂಪು ಅಧ್ಯಯನ ಕೇಂದ್ರವು ವಿಚಾರಸಂಕಿರಣವನ್ನು ಏರ್ಪಡಿಸಿತ್ತು. ಅದೇ ಸಂಜೆ ಮೈಸೂರಿನ ಗಾಂಧಿ ಚೌಕದಲ್ಲಿ ಮಹಿಳೆಯರ ದೇಹದ ಮೇಲೆ ನಡೆಯುವ ಹಿಂಸೆಯ ವಿರುದ್ಧ ಕಪ್ಪು ಉಡುಪಿನಲ್ಲಿ ಮಹಿಳೆಯರ ಶಾಂತಿಯುತ ಪ್ರತಿಭಟನೆ ನಡೆಸಲಾಯಿತು.

ದಿನಾಂಕ 8–3–2014ರಂದು ಮೈಸೂರಿನ ರಾಮಸ್ವಾಮಿ ವೃತ್ತದಿಂದ ದಸರಾ ವಸ್ತು ಪ್ರದರ್ಶನ ಮೈದಾನದವರೆಗೂ ಬೃಹತ್ ಹಕ್ಕೊತ್ತಾಯ ಜಾಥಾ ನಡೆಯಿತು. ಸುಮಾರು 5000 ಮಂದಿ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ರ್‍ಯಾಲಿಯ ನಂತರ ಮೈದಾನದಲ್ಲಿ ಸಾರ್ವಜನಿಕ ಸಭೆಯನ್ನು ನಡೆಸಲಾಯಿತು. ❐

**ಸೂಜಿ-ದಾರ** ಸಂಪಾದಕ ಮಂಡಳಿ

ಗೌರವ ಸಂಪಾದಕರು : **ದು. ಸರಸ್ವತಿ**
ಸಂಪಾದಕರು : **ಪ್ರತಿಭಾ ಆರ್.**
ಸಲಹೆ–ಸಹಕಾರ : **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಪದಾಧಿಕಾರಿಗಳು**

Registered with Registrar of Newspapers of India under No. KARKAN/2011/21668

**‘SUJI-DARA’,** REGD.No.: MAG(2) CR/PRB/32/11-12

*ಈ ಸಂಚಿಕೆಯನ್ನು ಪ್ರಾಯೋಜಿಸಿದ*
**ಶ್ರೀಮತಿ ಸಬೀಹಾ ಭೂಮಿಗೌಡ**
ಪ್ರಾಧ್ಯಾಪಕರು, ಮಂಗಳ ಗಂಗೋತ್ರಿ
ಅವರಿಗೆ
**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU**
ಧನ್ಯವಾದಗಳನ್ನು ಅರ್ಪಿಸುತ್ತಿವೆ.

# ಆತ್ಮಹತ್ಯೆ ಒಂದೇ ದಾರಿಯಲ್ಲ



*ಆತ್ಮೀಯ ಸಂಗಾತಿಗಳೇ,*

ಓಡುತ್ತಿರುವ ಪ್ರಪಂಚ, ಆಗುತ್ತಿರುವ ಹೊಸ ಆರ್ಥಿಕನೀತಿಗಳು, ನವ ಆರ್ಥಿಕ ಉದಾರೀಕರಣ ನೀತಿಗಳು ನೇರವಾಗಿ ದುಡಿಯುತ್ತಿರುವ ವರ್ಗದ ಮೇಲೆ ಆಗುತ್ತಿದೆ. ಅದೇ ರೀತಿ ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುತ್ತಿರುವ ಕಾರ್ಮಿಕರ ಮೇಲೆ ಯಾವ ಮಟ್ಟದಲ್ಲಿ ಆಗುತ್ತಿದೆ ಎಂದರೆ. ಅವರು ಪಡೆಯುತ್ತಿರುವ ವೇತನಕ್ಕೂ ಅವರು ಬದುಕುತ್ತಿರುವ ಬದುಕಿಗೂ ಯಾವ ಸಂಬಂಧವು ಇಲ್ಲದಂತಾಗಿದೆ. ತಿಂಗಳಿಗೆ ಸರ್ಕಾರ ನಿಗದಿಮಾಡಿರುವ ಕನಿಷ್ಟ ವೇತನ 6500 ರೂ. ಮಾತ್ರ. ಈ ವೇತನದಲ್ಲಿ ಬದುಕ ಬಹುದೇ ಎಂಬ ಸ್ವಾಭಾವಿಕ ಪ್ರಶ್ನೆ ಎಲ್ಲರೂ ಕೇಳಲೇಬೇಕು, ಗಾರ್ಮೆಂಟ್ಸ್‌ನಲ್ಲಿ ಸುಮಾರು 95% ಮಹಿಳಾ ಕಾರ್ಮಿಕರೇ ದುಡಿಯುತ್ತಿದ್ದು ಹೆಚ್ಚಿನ ಮಹಿಳೆಯರು ತಮ್ಮ ಗಂಡನಿಂದ, ಮನೆಯಿಂದ ಹೊರದೂಡಲ್ಪಟ್ಟಿರುವರೇ ಮತ್ತು ಒಂಟಿಯಾಗಿ ಸಂಸಾರದ ಹೊರೆ ಹೊತ್ತಿರುವವರೇ. ಇದರೊಂದಿಗೆ ಕಾರ್ಖಾನೆಗಳಲ್ಲಿ ಪ್ರೊಡಕ್ಷನ್ ಟಾರ್ಗೆಟ್ ಎಂಬ ಭೂತ, ನೆಮ್ಮದಿಯಾಗಿ ಕನಿಷ್ಠ ಮಟ್ಟದ ಜೀವನವನ್ನೂ ಸಾಗಿಸಲಾರದಷ್ಟು ಕಡಿಮೆ ವೇತನ, ಮತ್ತು ಅತಿಯಾದ ಶೋಷಣೆಯು, ಮಹಿಳಾ ಕಾರ್ಮಿಕರ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಒತ್ತಡಗಳನ್ನು ಹೆಚ್ಚಿಸುತ್ತಿದೆ. ಬದುಕಲು ಬೇರೆ ದಾರಿ ಕಾಣದೆ ಕೆಲವರು ಆದ್ದರಿಂದ ಆತ್ಮಹತ್ಯೆ ದಾರಿಯನ್ನು ತುಳಿಯುತ್ತಿದ್ದಾರೆ. ಎಷ್ಟೋ ಜನ GATWU ಕಾರ್ಯಕರ್ತರೊಂದಿಗೆ "ಅಯ್ಯೋ ಈ ಜೀವನವೇ ಸಾಕಾಗಿ ಹೋಗಿದೆ, ನಮ್ಮ ಸ್ಥಿತಿ ಯಾವತ್ತಿಗೂ ಬದಲಾಗಲ್ಲ, ದುಡಿಯೋದು ಮೈತುಂಬಾ ಆದ್ರೂ ಸಂಬಳ ಮಾತ್ರ ಕೈ ತುಂಬ ಬರಲ್ಲ, ಜೊತೆಗೆ ಹಿಂಸೆ ಬೇರೆ, ನಾವು ಬದುಕಿರುವುದಕ್ಕಿಂತ ಸಾಯುವುದೇ ಮೇಲು ಎನ್ನುತ್ತಾರೆ' ಜೊತೆಗೆ ಅತಿ ಶೀಘ್ರವಾಗಿ ಬದಲಾಗುತ್ತಿರುವ ನಗರಜೀವನದ ಒತ್ತಡವೂ ಇದರೊಂದಿಗೆ ಸೇರಿದೆ. ಆತ್ಮಹತ್ಯೆ, ಅಪಘಾತಗಳಿಂದ ಕಾರ್ಮಿಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಉದಾಹರಣೆ: ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಗಾರ್ಮೆಂಟ್ ಒಂದರಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರು ಸೀಮೆಎಣ್ಣೆ ಸುರಿದುಕೊಂಡು ಸುಟ್ಟುಕೊಂಡು ಅಸುನೀಗಿದ್ದಾರೆ. ಮಾಗಡಿಯಿಂದ ತಮ್ಮ ತುತ್ತಿನ ಚೀಲವನ್ನು ತುಂಬಿಸಿಕೊಳ್ಳಲು ತುಮಕೂರು ರಸ್ತೆಯ ಗೋಕುಲ್‌ದಾಸ್ ಇಮೇಜಸ್ ಗಾರ್ಮೆಂಟ್ಸ್‌ಗೆ ಕಾರ್ಮಿಕರನ್ನು ಕರೆತರುತ್ತಿದ್ದ ವಾಹನ ಅಪಘಾತಕ್ಕೆಡಾಗಿ ಇಬ್ಬರು ಕಾಮಿಕರು ಸಾವನ್ನಪ್ಪಿದ್ದಾರೆ. ಇವೆಲ್ಲವು ಒಂದು ದೊಡ್ಡ ದುರಂತವೇ ಸರಿ. ಈ ಎಲ್ಲಾ ಸ್ಥಿತಿಗೆ ಕಾರ್ಮಿಕರಲ್ಲ ಕಾರಣರು, ಸರ್ಕಾರ, ಮಾಲೀಕರು ಮತ್ತು ಬ್ರಾಂಡ್‌ಗಳು. ಇವರನ್ನು ನಾವು ಪ್ರಶ್ನಿಸಲೇ ಬೇಕಾದ ಸಮಯ ಬಂದಿದೆ. ಈ ಹಿನ್ನೆಲೆಯಲ್ಲಿ GATWU ತಿಂಗಳಿಗೆ ಕನಿಷ್ಠ 12000 ರೂ. ವೇತನ ಬೇಕು ಎಂದು ಸರ್ಕಾರದ ಮಟ್ಟದಲ್ಲಿ, ಬ್ರಾಂಡ್‌ಗಳ ಮಟ್ಟದಲ್ಲಿ ನಿರಂತರ ಹೋರಾಟ ನಡೆಸುತ್ತಿದೆ. ಕಾರ್ಮಿಕರು ಎಂದಿಗೂ ಸಾವಿನ ಬಗ್ಗೆ ಯೋಚಿಸಲೇ ಬಾರದು. ನಮ್ಮ ಕಷ್ಟ ಸುಖಗಳನ್ನು ಕೇಳುವ, ನಮಗೆ ನೆರವು ನೀಡುವ ನಮ್ಮದೇ ಆದ ಸಂಘಟನೆಗಳಿವೆ. ನಮ್ಮನ್ನು ಶೋಷಿಸುತ್ತಿರುವವರ ವಿರುದ್ಧ ಹೋರಾಡಬೇಕೇ ಹೊರತು ನಮ್ಮ ಅಮೂಲ್ಯ ಬದುಕನ್ನು ಕೊನೆ ಗೊಳಿಸಿಕೊಳ್ಳುವುದರಲ್ಲಿ ಯಾವ ಸಾರ್ಥಕತೆಯೂ ಇಲ್ಲ.

ಮಹಿಳಾ ಕಾರ್ಮಿಕರು ಈ ಎಲ್ಲಾ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು, GATWU ಹಾಗೂ 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' ಸದಸ್ಯತ್ವವನ್ನು ಪಡೆದುಕೊಂಡು ನಿಮ್ಮ ಬೆಂಬಲ ಹೆಚ್ಚಿಸಿಕೊಳ್ಳಿ, ಆತ್ಮಹತ್ಯೆ ಒಂದೇ ದಾರಿಯಲ್ಲ, ಬರುವ ಸಮಸ್ಯೆಗಳನ್ನು ಎಲ್ಲರೊಂದಿಗೆ ಕೂಡಿ ಎದುರಿಸಲು, ಹೋರಾಡಲು ಎದ್ದೇಳಿ.

■ ರಾಜು. ಬಿ.ಸಿ.

# ನಮ್ಮನ್ನಗಲಿದ ಮಾನವ ಹಕ್ಕುಗಳ ಪ್ರತಿಪಾದಕ



ದಿನಾಂಕ 11–2–2014ರಂದು ಪಿ.ಯು.ಸಿ.ಎಲ್.ನ ಪ್ರೊ.ಹಸನ್ ಮನ್ಸೂರ್‌ರವರು ನಮ್ಮನ್ನೆಲ್ಲ ಬಿಟ್ಟು ಅಗಲಿದ್ದಾರೆ. ಜನಪರ ಸಂಘಟನೆಗಳ, ನೊಂದವರ ಪರವಾಗಿ ನಿಲ್ಲುತ್ತಿದ್ದ, ಮಹಾನ್ ಮಾನವ ಹಕ್ಕುಗಳ ಪ್ರತಿಪಾದಕರಾಗಿದ್ದ ಪ್ರೊಫೆಸರ್ ಅವರನ್ನು ಕಳೆದುಕೊಂಡಿದ್ದು ನಮಗೆಲ್ಲ ದೊಡ್ಡ ನಷ್ಟವಾಗಿದೆ.

ಪ್ರೊಫೆಸರ್ ಮನ್ಸೂರ್‌ರವರು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ಗಳನ್ನು ಪ್ರಾರಂಭದಿಂದಲೂ ಬೆಂಬಲಿಸಿದ್ದರು, ಮುಖ್ಯವಾದ ಹಂತಗಳಲ್ಲಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ್ದರು. ದಿನಾಂಕ 1–3–2014ರಂದು ಬೆಂಗಳೂರಿನ ಜನಪರ ಸಂಘಟನೆಗಳು ಆಯೋಜಿಸಿದ್ದ 'ಹಸನ್ ಮನ್ಸೂರ್ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ನಮ್ಮ ಸಂಘಟನೆಯಿಂದ "ಕಟ್ಟುತ್ತೇವ ನಾವು ಕಟ್ಟುತ್ತೇವ" ಹಾಡಿನ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪ್ರೊಫೆಸರ್ ಹಸನ್‌ಮನ್ಸೂರ್ ಅವರನ್ನು ಈ ಮೂಲಕ ಮತ್ತೊಮ್ಮೆ ಸ್ಮರಿಸುತ್ತಾ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇವೆ.



ಪ್ರಜಾವಾಣಿ

ಭಾನುವಾರ
2ನೇ ಮಾರ್ಚ್ 2014
3A B

ಗಾಯನ
ಮಾನವ ಹಕ್ಕು ಕಾರ್ಯಕರ್ತರು ಶನಿವಾರ ಸಂಸ ಬಯಲು ರಂಗ ಮಂದಿರದಲ್ಲಿ ಆಯೋಜಿಸಿದ್ದ 'ಪ್ರೊ. ಹಸನ್ ಮನ್ಸೂರ್ ಅವರ ಸಂಸ್ಮರಣೆ' ಕಾರ್ಯಕ್ರಮದಲ್ಲಿ ಗಾರ್ಮೆಂಟ್ಸ್ ವರ್ಕರ್ಸ್ ಅಸೋಸಿಯೇಷನ್ ತಂಡ ಗಾಯನ ಪ್ರಸ್ತುತಪಡಿಸಿತು

# ಗಾರ್ಮೆಂಟ್ಸ್ ಉದ್ಯಮ ಹಾಗೂ ಕಾರ್ಮಿಕರ ಸಮರ್ಥ

*ದಿನಾಂಕ 6.01.2014 ರಂದು ಕನಿಷ್ಠ ವೇತನದ ಉಪಸಮಿತಿಯು ನಡೆಸಿದ ಸರ್ಕಾರ, ಮಾಲೀಕರು ಹಾಗೂ ಯೂನಿಯನ್‌ಗಳ ತ್ರಿಪಕ್ಷೀಯ ಸಭೆಯಲ್ಲಿ ಕಳೆದ 40 ವರ್ಷಗಳಲ್ಲಿ ಮೊದಲ ಬಾರಿಗೆ ಗಾರ್ಮೆಂಟ್ಸ್ ಕಾರ್ಮಿಕರಿಗೆ ದಿನಕ್ಕೆ ರೂ. 27.00 ಕನಿಷ್ಠ ವೇತನ ಹೆಚ್ಚಾಗಿದೆ. ಹಲವಾರು ವರ್ಷಗಳಿಂದ ನಿರಂತರವಾಗಿ GATWU ಹೋರಾಟ ನಡೆಸಿದುದರ ಪ್ರತಿಫಲವಾಗಿ ಇಂದು ಗಾರ್ಮೆಂಟ್ಸ್ ಕಾರ್ಮಿಕರಿಗೆ ಈ ವೇತನವು ದೊರಕುತ್ತಿದೆ. ಈಗ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿಯುವ ಹೆಲ್ಪರ್ ಒಬ್ಬರಿಗೆ ತಿಂಗಳಿಗೆ ರೂ. 6565.78 ಗಿಂತ ಕಡಿಮೆ ವೇತನ ನೀಡುವಂತಿಲ್ಲ. ಕಾರ್ಮಿಕರ ಬದುಕುವ ವೇತನದ ಅವಶ್ಯಕತೆಯನ್ನು ಈ ವೇತನವು ಪೂರೈಸದಿದ್ದರೂ, ಹಿಂದಿನ ಪರಿಷ್ಕರಣೆಗಳ ಅನುಭವಗಳನ್ನು ತೆಗೆದುಕೊಂಡರೆ ಇದೊಂದು ಸಾಹಸವೇ ಸರಿ. ಈ ಮೊತ್ತದ ಕನಿಷ್ಠ ವೇತನ ಪರಿಷ್ಕರಣೆಯಾಗಲು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು GATWU ಸಂಘಟನೆಗಳು ನಡೆಸಿದ ನಿರಂತರ ಹೋರಾಟದ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ಕೊಡಲಾಗಿದೆ.*

1973 ರಿಂದಲೂ ಬೆಂಗಳೂರಿನಲ್ಲಿ ಎಕ್ಸ್‌ಪೋರ್ಟ್ಸ್ ಗಾರ್ಮೆಂಟ್ಸ್ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿರುತ್ತಿವೆ. ಕಾರ್ಮಿಕರೇ ಪ್ರಧಾನವಾಗಿರುವ ಈ ಉದ್ಯಮದಲ್ಲಿ ಮೊದಲಿನಿಂದಲೂ ಕಾರ್ಮಿಕ ಶೋಷಣೆ ತಪ್ಪಿದ್ದಲ್ಲ. 90 ಭಾಗಕ್ಕಿಂತಲೂ ಹೆಚ್ಚು ಮಹಿಳಾ ಕಾರ್ಮಿಕರೇ ದುಡಿಯುತ್ತಿರುವ ಉದ್ಯಮದಲ್ಲಿ ಕಾರ್ಮಿಕ ಕಾನೂನುಗಳು ನಗಣ್ಯ. ಅದರ ಉಲ್ಲಂಘನೆ ನಿರಂತರ. ಸಮರ್ಥ ಕಾರ್ಮಿಕ ಸಂಘಟನೆಗಳ ಕೊರತೆ. ಒಂದೊಮ್ಮೆ ಕಾರ್ಮಿಕರು ಒಗ್ಗಟ್ಟಾದರೂ ಸಹ ಆಡಳಿತವರ್ಗದ ದೌರ್ಜನ್ಯವನ್ನು ಎದುರಿಸಿ ಗಟ್ಟಿಯಾಗಿ ನೆಲೆಯೂರಲು ಸಾದ್ಯವಿರಲಿಲ್ಲ. (ಸಾಮ್ರಾಟ್ ಅಶೋಕ ಕಾರ್ಖಾನೆಯಲ್ಲಿ ಸಣ್ಣದೊಂದು ಪ್ರಯತ್ನ ನಡೆದರೂ ಸಹ ಸಂಘಟನೆಯ ವೈಫಲ್ಯವು ಮುಂದೆ ಹಲವಾರು ವರ್ಷ ಕಾರ್ಮಿಕರು ಯೂನಿಯನ್ ಅಂದರೇ ಹೆದರುವಂತಾಯಿತು). ಒಂದೆಡೆ ಸಾವಿರಾರು ಕೋಟಿ ವಹಿವಾಟು ನಡೆಸುತ್ತಾ, ನೂರಾರು ಕೋಟಿ ಲಾಭ ಸಂಪಾದಿಸುತ್ತಿರುವ ಕಾರ್ಖಾನೆಯ ಮಾಲೀಕರು, ಇನ್ನೊಂದೆಡೆ ಮಾಲೀಕರಿಗೇ ಹೆಚ್ಚು ಪ್ರಾಧಾನ್ಯ ಕೊಟ್ಟ ಸರ್ಕಾರದ ನೀತಿಗಳು ಮತ್ತು ವ್ಯವಸ್ಥೆಗಳು, ಇವರೆಲ್ಲರಿಗಿಂತ ಹೆಚ್ಚಾಗಿ, ಹೆಸರಿನ ಬಲದಿಂದಲೇ ಸಾವಿರಾರು ಕೋಟಿ ಲಾಭ ಸಂಪಾದಿಸುವ ಅಂತರರಾಷ್ಟ್ರೀಯ ಬ್ರಾಂಡ್‌ಗಳು ಈ ಮೂವರ ಮಧ್ಯೆ ಶೋಷಣೆಗೊಳಗಾಗುತ್ತಿದ್ದ ಕಾರ್ಮಿಕರನ್ನು ಕೇಳುವವರೇ ಇರಲಿಲ್ಲ.

ಇದಕ್ಕೊಂದು ಉದಾಹರಣೆಯೆಂದರೆ, ಪ್ರತಿಬಾರಿ ಕನಿಷ್ಠ ವೇತನವನ್ನು ಸರ್ಕಾರ 1–2 ರೂ. ಹೆಚ್ಚಿಸಿದಾಗ ಮಾಲೀಕರು ತಮ್ಮ ಪ್ರಭಾವ ಬಳಸಿ ಅದನ್ನೂ ಸಹ ಕಡಿಮೆ ಮಾಡುತ್ತಿದ್ದರು. 2009 ರಲ್ಲಿಯೂ ಇದೇ ಪುನರಾವರ್ತನೆಯಾದಾಗ **GATWU** ಪ್ರಶ್ನಿಸುವವರೆಗೂ, ಕಾರ್ಮಿಕರ ಪ್ರತಿನಿಧಿಯಾಗಿ ಯಾರೂ ಸಹ ಧ್ವನಿ ಎತ್ತಿರಲಿಲ್ಲ.

2004 ರಲ್ಲಿ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಮತ್ತು 2006 ರಿಂದ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಕಾರ್ಮಿಕರ ಪ್ರತಿನಿಧಿಯಾಗಿ, ಕಾರ್ಮಿಕರ ಸದಸ್ಯತ್ವ ಇರಲಿ, ಇಲ್ಲದಿರಲಿ, ಮೊದಲಿನಿಂದಲೂ ಕಾರ್ಮಿಕರ ಶೋಷಣೆಯನ್ನು ವಿರೋಧಿಸುತ್ತಲೇ ಬಂದಿವೆ. ಕಾರ್ಮಿಕರ ಸಾಮಾಜಿಕ ಸ್ಥಿತಿಗತಿ, ಕೆಲಸದ ಪರಿಸ್ಥಿತಿಗಳು ಉತ್ತಮಗೊಳ್ಳಲು ಬದ್ಧವಾಗಿ ನಿಂತಿವೆ.

ಕಾರ್ಮಿಕರನ್ನು ಸಾಂಪ್ರದಾಯಿಕವಾಗಿ ಸಂಘಟಿಸುವುದರ ಜೊತೆಗೆ ಅವರನ್ನು ವಾಸಸ್ಥಳದಲ್ಲಿ ಸಂಘಟಿಸುವುದು, ಅವರ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವುದು, ಸರ್ಕಾರ, ಮಾಧ್ಯಮ ಮತ್ತು ಸಾರ್ವಜನಿಕ ವಲಯದಲ್ಲಿ, ಕಾರ್ಮಿಕರ ಪರಿಸ್ಥಿತಿಯನ್ನು ಕುರಿತು ಅರಿವು ಮೂಡಿಸುವುದು, ಅಂತರರಾಷ್ಟ್ರೀಯ ಗ್ರಾಹಕ ಸಂಘಟನೆಗಳೊಂದಿಗೆ ಸಂಪರ್ಕ, ಸ್ಥಳೀಯ ಸಂಘಟನೆಗಳ ಬೆಂಬಲ, ಕಾರ್ಮಿಕ ಕಾನೂನುಗಳು ಉಲ್ಲಂಘನೆಯಾದಾಗ ನ್ಯಾಯಾಲಯದಲ್ಲಿ ಪ್ರತಿನಿಧಿಸಿ, ಅವರಿಗೆ ನ್ಯಾಯ ಒದಗಿಸುವುದು, ಅಗತ್ಯವಿದ್ದಾಗಲೆಲ್ಲಾ ಬೀದಿಗೆ ಬಂದು ಪ್ರತಿಭಟಿಸುವುದು, ಕಾರ್ಮಿಕರ ಪರಿಸ್ಥಿತಿ ಉತ್ತಮಗೊಳ್ಳಲು ಸರ್ಕಾರದೊಂದಿಗೆ ವಕಾಲತ್ತು ನಡೆಸುವುದು. . . ಹೀಗೇ ಹಲವಾರು ಕಾರ್ಯತಂತ್ರಗಳನ್ನು ಅಳವಡಿಸಿಕೊಂಡು ಕಾರ್ಮಿಕರಿಗೆ ನ್ಯಾಯ ಒದಗಿಸುವ ಎಲ್ಲ ಸಾಧ್ಯತೆಗಳಲ್ಲಿಯೂ ಕೆಲಸ ಮಾಡಿರುವುದು ಈ ಸಂಘಟನೆಗಳ ಸಾಧನೆಯೆಂದೇ ಹೇಳಬಹುದು.

ಈ ನಿರಂತರ ಪ್ರಯತ್ನಗಳಿಂದಾಗಿ ಇಂದು ಪ್ರಧಾನವಾಗಿ ಮೈಸೂರು ರಸ್ತೆ, ಪೀಣ್ಯ ಪ್ರದೇಶ, ಮದ್ದೂರು, ಮೈಸೂರು, ರಾಮನಗರ ಹೀಗೇ ಹಲವಾರು ಸ್ಥಳಗಳ ಗಾರ್ಮೆಂಟ್ಸ್ ಕಾರ್ಮಿಕರು ತಮ್ಮ ಮೇಲಾಗುವ ದೌರ್ಜನ್ಯವನ್ನು ನಿರ್ಭಯವಾಗಿ ಪ್ರಶ್ನಿಸಲು ಶಕ್ತರಾಗಿದ್ದಾರೆ ಮತ್ತು ನ್ಯಾಯ ಪಡೆದುಕೊಳ್ಳುವಲ್ಲಿಯೂ ಸಹ ಸಫಲರಾಗಿದ್ದಾರೆ. ಜೊತೆಗೆ ಧೈರ್ಯವಾಗಿ ತಾವು ಯೂನಿಯನ್ ಸದಸ್ಯರು ಎಂದು ಹೇಳಿ ಕೆಲಸ ಮಾಡುತ್ತಿದ್ದಾರೆ.

ಈ ಅರಿವು ಇನ್ನೂ ಹೆಚ್ಚಿ, ಕಾರ್ಮಿಕರು ತಮ್ಮ ಮಾಲೀಕರೊಂದಿಗೆ ಸಾಮೂಹಿಕ ಚೌಕಾಸಿಯ ಒಪ್ಪಂದ ಮಾಡಿಕೊಂಡು, ಉತ್ತಮ ಕೆಲಸದ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕೆಂಬುದೇ ಈ ಎರಡೂ ಸಂಘಟನೆಗಳ ಆಶಯವಾಗಿದೆ.

## ಕನಿಷ್ಠ ವೇತನ ಆಂದೋಲನದ ವಿವಿಧ ಹಂತಗಳು:

**ಹಿನ್ನೆಲೆ:** ಕರ್ನಾಟಕ ಸರ್ಕಾರವು ಗಾರ್ಮೆಂಟ್ಸ್ ಉದ್ಯಮವನ್ನು 1979 ರಲ್ಲಿ ಕನಿಷ್ಠ ವೇತನ ಕಾಯಿದೆಯಡಿಯಲ್ಲಿ 'ಟೈಲರಿಂಗ್ ಇಂಡಸ್ಟ್ರೀ ಎಂದು ಗುರುತಿಸಿ ಕನಿಷ್ಠ ವೇತನವನ್ನು ನಿಗದಿ ಪಡಿಸಿತು.

ಈ ಕಾಯಿದೆಯ ಪ್ರಕಾರ ಪ್ರತಿ 3 ರಿಂದ 5 ವರ್ಷಕ್ಕೊಮ್ಮೆ ಈ ವೇತನವು ಪರಿಷ್ಕರಣೆಯಾಗಬೇಕು. ಇದಕ್ಕಾಗಿ ಸರ್ಕಾರವು ಸಮಿತಿಯೊಂದನ್ನು ರಚಿಸಬೇಕು.

1979 ರಿಂದ 2009 ರ 30 ವರ್ಷದ ಅವಧಿಯಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೆ ಹೆಚ್ಚೆಂದರೆ 5 ಬಾರಿ ಕನಿಷ್ಠವೇತನ ಪರಿಷ್ಕರಣೆಯಾಗಿದೆ, ಮತ್ತು ವಿಪರ್ಯಾಸವೆಂದರೆ ಪ್ರತಿ ಬಾರಿಯೂ ಮಾಲೀಕ ವರ್ಗವು ತನ್ನ ಹಣ ಮತ್ತು ಅಧಿಕಾರವನ್ನು ಬಳಸಿ ಪರಿಷ್ಕರಣೆಯಾದ ಕನಿಷ್ಠವೇತನವನ್ನು ಕಡಿಮೆಗೊಳಿಸಿದೆ. ಸರ್ಕಾರ ಹಾಗೂ ಅಧಿಕಾರಿಗಳೂ ಸಹ ಬಂಡವಾಳಶಾಹೀ ಪರ ಧೋರಣೆಯನ್ನು ಅನುಸರಿಸಿ, ಕಾರ್ಮಿಕರ ವೇತನವು ಹೆಚ್ಚಾಗದಂತೆ ಪರೋಕ್ಷವಾಗಿ ಸಹಕರಿಸುತ್ತಿದೆ. ಜೊತೆಗೆ ಪರಿಷ್ಕರಣಾ ಸಮಿತಿಯಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಸಮರ್ಥ ಪ್ರತಿನಿಧಿಗಳಿಲ್ಲದಿರುವುದೂ ಒಂದು ಕಾರಣವಾಗಿತ್ತು.

**2001–2007 :** 2001 ರಲ್ಲಿ ಪರಿಷ್ಕರಣೆಗೊಂಡ ಗಾರ್ಮೆಂಟ್ ಕಾರ್ಮಿಕರ ಕನಿಷ್ಠ ವೇತನವು 2007 ಆದರೂ ಪುನ: ಪರಿಷ್ಕರಣೆಯಾಗಲಿಲ್ಲ. ಆ ಸಮಯದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರ ಕನಿಷ್ಠ ವೇತನವು ದಿನಕ್ಕೆ 101 ರೂ. ಗಳಿತ್ತು. ಈ

# ಪ್ರತಿನಿಧಿಯಾಗಿ GATWU - ಕೆಲವು ಸಾಧನೆಗಳು / ಮೈಲಿಗಲ್ಲುಗಳು

ಸಮಯದಲ್ಲಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಕನಿಷ್ಠ ವೇತನ ಆಂದೋಲನವನ್ನು ಪ್ರಾರಂಭಿಸಿತು. ಕಾರ್ಮಿಕರ ತಿಂಗಳ ಖರ್ಚು ವೆಚ್ಚದ ಸಮೀಕ್ಷೆ ನಡೆಸಿ, ದಿನಕ್ಕೆ 200 ರೂ. ಬೇಕೆ ಬೇಕು ಎಂದು ಸರ್ಕಾರವನ್ನು ಆಗ್ರಹಿಸಿತು. ಅತ್ಯಂತ ಕಡಿಮೆ ವೇತನ ನಿಗದಿ ಪಡಿಸಿರುವ ಬಗ್ಗೆ ಮತ್ತು 7 ವರ್ಷಗಳಿಂದ ಪರಿಷ್ಕರಣೆಯಾಗದಿರುವ ಬಗ್ಗೆ ಕಾರ್ಮಿಕ ಮಂತ್ರಿ, ಇಲಾಖೆಯ ಅಧಿಕಾರಿಗಳು, ಮುಖ್ಯಮಂತ್ರಿ ಹೀಗೇ ಎಲ್ಲರಿಗೂ ಜ್ಞಾಪನಾ ಪತ್ರಗಳನ್ನು ನೀಡಿ, ತಕ್ಷಣವೇ ಪರಿಷ್ಕರಣಾ ಸಮಿತಿಯನ್ನು ರಚಿಸಬೇಕೆಂದು ಹಲವಾರು ರೀತಿಯಲ್ಲಿ ಒತ್ತಡ ಹಾಕಿತು. ಕಾರ್ಮಿಕರ ರ್‍ಯಾಲಿ, ಪ್ರತಿಭಟನೆಗಳು, ಸಾರ್ವಜನಿಕ ಸಭೆಗಳು, ಇತ್ಯಾದಿಗಳು ಸರ್ಕಾರದ ಮೇಲೆ ಒತ್ತಡ ನಿರ್ಮಿಸಿ, 2007 ರಲ್ಲಿ ಪರಿಷ್ಕರಣಾ ಸಮಿತಿಯನ್ನು ರಚಿಸಿತು.

**ಕನಿಷ್ಠ ವೇತನ ಪರಿಷ್ಕರಣಾ ಸಮಿತಿ:** 2007 ರಲ್ಲಿ ರಚಿತವಾದ ಈ ಸಮಿತಿಯು ಗಾರ್ಮೆಂಟ್ಸ್ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಹೆಚ್ಚಿಸಿ ಸರ್ಕಾರಕ್ಕೆ ತನ್ನ ಶಿಫಾರಸನ್ನು ಕಳುಹಿಸಿತು. ಇದರ ಆಧಾರದ ಮೇಲೆ ಸರ್ಕಾರ 2007 ರಲ್ಲಿ ಕರಡು ಆದೇಶವನ್ನು ಇತರರ ಅಭಿಪ್ರಾಯ ಸಂಗ್ರಹಣೆಗಾಗಿ ಹೊರಡಿಸಿತು. ಆದರೆ ಇದು ಅಂತಿಮ ಆದೇಶವಾಗಿ ಹೊರಬರಲು 2 ವರ್ಷ ತೆಗೆದುಕೊಂಡಿತು.

**ಮಾರ್ಚ್ 2009 :** ಕಡೆಗೂ 2009 ರ ಮಾರ್ಚ್‌ನಲ್ಲಿ ಕಾರ್ಮಿಕರಿಗೆ ದಿನಕ್ಕೆ ರೂ. 127 ಗಳನ್ನು ನಿಗದಿ ಪಡಿಸಿ ಸರ್ಕಾರವು ಅಂತಿಮ ಆದೇಶವನ್ನು ಹೊರಡಿಸಿತು. 2001 ರಿಂದ 2009 ರ ವರೆಗೂ 9 ವರ್ಷಗಳ ಕಾಲ ಕಾರ್ಮಿಕರ ವೇತನದಲ್ಲಿ ಯಾವುದೇ ಹೆಚ್ಚಳವಾಗಿರಲಿಲ್ಲ. ಇಷ್ಟಾದರೂ, ಸರ್ಕಾರ ಪರಿಷ್ಕರಿಸಿದ 127 ರೂ. ಗಳ ಕನಿಷ್ಠ ವೇತನವನ್ನು ಯಾವ ಮಾಲೀಕ ವರ್ಗವೂ ಜಾರಿಗೊಳಿಸಲಿಲ್ಲ. ಮತ್ತು ಗಣನೆಗೂ ತೆಗೆದುಕೊಳ್ಳಲಿಲ್ಲ. ಬದಲಿಗೆ ಎಂದಿನಂತೆ ಅದನ್ನು ಕಡಿಮೆಗೊಳಿಸಲು ಹಲವಾರು ತೆರೆಮರೆಯ ಪ್ರಯತ್ನಗಳು ನಡೆದವು.

**ಮೇ–ಅಕ್ಟೋಬರ್ 2009:** GATWU ಎಲ್ಲ ಪ್ರಮುಖ ಆಡಳಿತವರ್ಗಕ್ಕೆ ಪತ್ರ ಬರೆದು ರೂ. 127 ರ ಕನಿಷ್ಠ ವೇತನವನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿತು. ಆದರೆ ಯಾವುದೇ ಪ್ರಯೋಜನವಾಗಲಿಲ್ಲ. ಮತ್ತೊಂದು ಬಾರಿ ಎಲ್ಲರಿಗೂ ಮರು ಜ್ಞಾಪನಾ ಪತ್ರಗಳನ್ನು ಕಳುಹಿಸಿತು. ಇದಕ್ಕೂ ಆಡಳಿತವರ್ಗವು ಯಾವುದೇ ರೀತಿಯ ಪ್ರತಿಕ್ರಿಯೆ ತೋರಲಿಲ್ಲ.

ನಂತರ ಎರಡನೆಯ ಹೆಜ್ಜೆಯಾಗಿ GATWU ಪ್ರಮುಖ ಅಂತರ ರಾಷ್ಟ್ರೀಯ ಬ್ರಾಂಡ್‌ಗಳಿಗೆ ತನ್ನ ಸಪ್ಲೈಯರ್ಸ್‌ಗಳಿಗೆ ಕನಿಷ್ಠ ವೇತನವನ್ನು ಜಾರಿಗೊಳಿಸಲು ಒತ್ತಡ ಹಾಕಬೇಕೆಂದು ಪತ್ರ ಬರೆಯಲಾಯಿತು. ಆದರೆ ಯಾವ ಬ್ರಾಂಡ್‌ಗಳೂ ಸಹ ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಇದರ ಜೊತೆಜೊತೆಗೇ ಸರ್ಕಾರದ ಅಧಿಕಾರಿಗಳಿಗೆ, ಕಾರ್ಮಿಕರ ಮಂತ್ರಿಗಳಿಗೆ ಜ್ಞಾಪನಾ ಪತ್ರಗಳನ್ನೂ ಸಹ ನೀಡಲಾಯಿತು.

ಇಷ್ಟೆಲ್ಲಾ ಒತ್ತಡ ಹಾಕಿದರೂ ಸಹ ಕಾರ್ಮಿಕರಿಗೆ ಸರ್ಕಾರ ನಿಗದಿ ಪಡಿಸಿದ ರೂ. 127 ರ ವೇತನ ಸಿಗಲಿಲ್ಲ.

**ಫೆಬ್ರವರಿ 2010 :** ಕಡೆಯದಾಗಿ GATWU ನ್ಯಾಯಾಂಗದ ಮೊರೆ ಹೋಗಿ 2010 ರ ಫೆಬ್ರವರಿಯಲ್ಲಿ ಕನಿಷ್ಠ ವೇತನವನ್ನು ಜಾರಿಗೊಳಿಸಲು ಆದೇಶಿಸಬೇಕೆಂದು ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಲ್ಲಿಸಿತು.

**ಮಾರ್ಚ್ 2010 :** ಆಶ್ಚರ್ಯಕರ ರೀತಿಯಲ್ಲಿ ಸರ್ಕಾರವು ಮಾರ್ಚ್ 30 2010 ರಂದು 2009ರ ತನ್ನ ಕನಿಷ್ಠ ವೇತನ ಆದೇಶವನ್ನು "ಟೈಪ್ ಮಾಡುವಾಗ ತಪ್ಪಾಗಿದೆ" ಎಂದು ಕಾರಣ ನೀಡಿ ಹಿಂಪಡೆದು ಹೊಸ ಕನಿಷ್ಠ ವೇತನ ಆದೇಶವನ್ನು ಹೊರಡಿಸಿತ್ತು. ಮತ್ತು ಈ ಹೊಸ ಆದೇಶದಲ್ಲಿ ದಿನಕ್ಕೆ ರೂ. 4.88 ಗಳನ್ನು ಕಡಿಮೆ ಗೊಳಿಸಿ ದಿನಕ್ಕೆ 122 ರೂ. ಗಳನ್ನು ನಿಗದಿ ಪಡಿಸಿ ಗಾರ್ಮೆಂಟ್ಸ್ ಕಾರ್ಮಿಕರಿಗೆ ಅನ್ಯಾಯ ಎಸಗಿತ್ತು. ಸರ್ಕಾರವೇ ಹೊರಡಿಸಿದ ಆದೇಶವನ್ನು ಉಲ್ಲಂಘಿಸಿ, ಕಡೆಗೆ ತಮ್ಮ ಹಣ ಬಲದಿಂದ ಸರ್ಕಾರವೇ ಆದೇಶವನ್ನು ಹಿಂಪಡೆಯುವಂತೆ ಮಾಡುವಲ್ಲಿ ಬಂಡವಾಳ ಶಾಹಿಗಳ ಹಣ ಬಲ, ಅಧಿಕಾರ ಬಲವು ಯಶಸ್ವಿಯಾಗಿ ಕೆಲಸ ಮಾಡಿತ್ತು.

**ಮುಂದಿನ ನಡೆ :** ಸರ್ಕಾರದ ಈ ಅನ್ಯಾಯದ ಕ್ರಮವನ್ನು ಬಲವಾಗಿ ಖಂಡಿಸಿ ಹೊಸ ಆದೇಶವನ್ನು ರದ್ದುಗೊಳಿಸಿ, 2009 ಆದೇಶವನ್ನೇ ಜಾರಿಗೊಳಿಸಬೇಕೆಂದು ಪ್ರಮುಖ ಆಡಳಿತವರ್ಗಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ವಿರುದ್ಧ **GATWU** ಪುನ: ನ್ಯಾಯಾಲಯದ ಮೊರೆ ಹೋಗಲಾಯಿತು ಮತ್ತು, 2009–2010 ರ ಅವಧಿಯ ಬಾಕಿ ವೇತನವನ್ನು ಅಂತರ ರಾಷ್ಟ್ರೀಯ ಸಂಘಟನೆಗಳ ನೆರವಿನೊಂದಿಗೆ ಕಾರ್ಮಿಕರಿಗೆ ಕೊಡಿಸುವಲ್ಲಿ **GATWU** ಯಶಸ್ವಿಯಾಯಿತು.

**ಉಚ್ಚ ನ್ಯಾಯಾಲಯದ ತೀರ್ಪು :** ಸತತ ಮೂರು ವರ್ಷಗಳ ಕಾಲ ವಾದ ವಿವಾದಗಳನ್ನು ಆಲಿಸಿದ ಉಚ್ಚ ನ್ಯಾಯಾಲಯವು 2013 ರ ಮಾರ್ಚ್ 11 ರಂದು, 2009 ರ ಆದೇಶದಲ್ಲಿ ಯಾವುದೇ "ಟೈಪಿಂಗ್ ದೋಷವಿರುವುದಿಲ್ಲ" ಎಂದು ಅಭಿಪ್ರಾಯ ಪಟ್ಟು 2010 ರ ಆದೇಶವನ್ನು ರದ್ದುಗೊಳಿಸಿ, ಆದೇಶವನ್ನು ಹೊರಡಿಸಿತು. ಜೊತೆಗೆ ಸರ್ಕಾರವು ಇನ್ನು ಮೂರು ತಿಂಗಳ ಒಳಗಾಗಿ ಯೂನಿಯನ್, ಆಡಳಿತವರ್ಗಗಳೊಂದಿಗೆ ಚರ್ಚಿಸಿ ಕಾರ್ಮಿಕರ ವೇತನವನ್ನು ಪರಿಷ್ಕರಿಸಬೇಕೆಂದು ಆದೇಶ ನೀಡಿತು.

**ಸರ್ಕಾರದ ಕ್ರಮ:** ಉಚ್ಚ ನ್ಯಾಯಲಯದ ತೀರ್ಪಿನನ್ವಯ ಕನಿಷ್ಠ ವೇತನವನ್ನು ಪರಿಷ್ಕರಿಸಲು ಸರ್ಕಾರವು ಅಪರ ಕಾರ್ಮಿಕ ಆಯುಕ್ತರ ನೇತೃತ್ವದಲ್ಲಿ ಉಪಸಮಿತಿಯನ್ನು ರಚಿಸಿತು. ಪ್ರಮುಖ ಗಾರ್ಮೆಂಟ್ಸ್ ಕಾರ್ಖಾನೆಗಳ ಮಾಲೀಕರು ಸಮಿತಿಯ ಭಾಗವಾಗಿದ್ದರು. ಸರ್ಕಾರ, ಕಾರ್ಮಿಕ, ಮಾಲೀಕರ ಈ ತ್ರಿಪಕ್ಷೀಯ ಸಭೆಯು 16.11.2013 ರಂದು ತನ್ನ ಮೊದಲ ಸಭೆಯನ್ನು ನಡೆಸಿತು. ಅಂದಿನಿಂದ ಸುಮಾರು 4 ಸಭೆಗಳಲ್ಲಿ ಚರ್ಚಿಸಿ ದಿನಾಂಕ 6.01.2014 ರಂದು ಕನಿಷ್ಠ ವೇತನ ಪರಿಷ್ಕರಣೆಯಲ್ಲಿ ಒಮ್ಮತದ ನಿರ್ಧಾರಕ್ಕೆ ಬರಲಾಯಿತು.

### ಕನಿಷ್ಠ ವೇತನ ಪರಿಷ್ಕರಣೆಯ ಜೊತೆಯಲ್ಲಿ ಸಮಿತಿಯಲ್ಲಿ ತೆಗೆದುಕೊಂಡ ಇತರ ನಿರ್ಣಯಗಳು

- ಈ ಮೊದಲು ಇದ್ದ 4 ವಲಯಗಳನ್ನು ರದ್ದುಗೊಳಿಸಿ ಅವನ್ನು 3 ಕ್ಕೆ ಇಳಿಸಲಾಗಿದೆ.

  (ವಲಯ–1 ಬೆಂಗಳೂರು ನಗರ, ವಲಯ–2 ಕರ್ನಾಟಕದ ಇತರೆ ಮುನಿಸಿಪಲ್ ಕಾರ್ಪೊರೇಷನ್ ಗೆ ಒಳಪಡುವ ನಗರಗಳು, ವಲಯ–3 ಇವೆರಡನ್ನು ಹೊರತು ಪಡಿಸಿದ ಎಲ್ಲ ಸ್ಥಳಗಳು
- 2014 ರ ವರೆಗಿನ ಡಿ.ಎ ಯನ್ನು ಮೂಲವೇತನಕ್ಕೆ ವಿಲೀನ ಗೊಳಿಸಲಾಗಿದೆ.
- 2014 ರ ಏಪ್ರಿಲ್ ನಿಂದ ಹೊಸದಾಗಿ ಡಿ.ಎ ಮೊತ್ತವು, ಜಾರಿಯಾಗುತ್ತದೆ.

❒

**ಗಾರ್ಮೆಂಟ್ಸ್ ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಣೆಯಾಗಿದ್ದು, ದಿನಾಂಕ 1-4-2014 ರಿಂದ ಈ ಆದೇಶವು ಜಾರಿಗೆ ಬರುತ್ತಿದೆ.**

**ವಲಯ–1 ಬೆಂಗಳೂರು ನಗರ**

| | |
|---|---|
| 1. **ಕುಶಲವಲ್ಲದ** (ಹೆಲ್ಪರ್, ಪ್ಯಾಕರ್, ಲೇಯರ್, ಟ್ರಿಮರ್,) | ರೂ. **193.52** ರಿಂದ ರೂ. **252.53** (ತಿಂಗಳಿಗೆ **6565.78**) |
| 2. **ಅರೆಕುಶಲ** (K/B ಆಪರೇಟರ್, ಮೆಷರ್‌ಮೆಂಟ್ ಚೆಕರ್, ಐರನರ್, ಓವರ್‌ಲಾಕ್ ಆಪರೇಟರ್, 2ನೇ ದರ್ಜೆ ಟೈಲರ್) | ರೂ. **198.22** ರಿಂದ ರೂ. **261.53** (ತಿಂಗಳಿಗೆ **6799.78**) |
| 3. **ಕುಶಲ** (1ನೇ ದರ್ಜೆ ಟೈಲರ್, ಚೆಕರ್) | ರೂ. **199.82** ರಿಂದ ರೂ. **264.53** (ತಿಂಗಳಿಗೆ **6877.78**) |
| 4. **ಅತಿಕುಶಲ** (ಟೈಲರ್) | ರೂ. **200.82** ರಿಂದ ರೂ. **272.53** (ತಿಂಗಳಿಗೆ **7085.78**) |


**ವಲಯ–2 ಬೆಂಗಳೂರು ನಗರ ಹೊರತು ಪಡಿಸಿ, ರಾಜ್ಯದ ಉಳಿದ ಮಹಾನಾಗರ ಪಾಲಿಕೆಯ ವ್ಯಾಪ್ತಿ**

| | |
|---|---|
| 1. **ಕುಶಲವಲ್ಲದ** (ಹೆಲ್ಪರ್, ಪ್ಯಾಕರ್, ಲೇಯರ್, ಟ್ರಿಮರ್,) | ರೂ. **191.12** ರಿಂದ ರೂ. **247.53** (ತಿಂಗಳಿಗೆ **6435.78**) |
| 2. **ಅರೆಕುಶಲ** (K/B ಆಪರೇಟರ್, ಮೆಷರ್‌ಮೆಂಟ್ ಚೆಕರ್, ಐರನರ್, ಓವರ್‌ಲಾಕ್ ಆಪರೇಟರ್, 2ನೇ ದರ್ಜೆ ಟೈಲರ್) | ರೂ. **193.92** ರಿಂದ ರೂ. **256.53** (ತಿಂಗಳಿಗೆ **6669.78**) |
| 3. **ಕುಶಲ** (1ನೇ ದರ್ಜೆ ಟೈಲರ್, ಚೆಕರ್) | ರೂ. **198.72** ರಿಂದ ರೂ. **259.53** (ತಿಂಗಳಿಗೆ **6747.78**) |
| 4. **ಅತಿಕುಶಲ** (ಟೈಲರ್) | ರೂ. **199.82** ರಿಂದ ರೂ. **267.53** (ತಿಂಗಳಿಗೆ **6955.78**) |

**ವಲಯ–3 ಉಳಿದ ಎಲ್ಲಾ ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿ**

| | |
|---|---|
| 1. ಕುಶಲವಲ್ಲದ (ಹೆಲ್ಪರ್, ಪ್ಯಾಕರ್, ಲೇಯರ್, ಟ್ರಿಮರ್,) | ರೂ. **183.22** ರಿಂದ ರೂ. **242.53** (ತಿಂಗಳಿಗೆ **6305.78**) |
| 2. ಅರೆಕುಶಲ (K/B ಆಪರೇಟರ್, ಮೆಷರ್‌ಮೆಂಟ್ ಚೆಕರ್, ಐರನರ್, ಓವರ್‌ಲಾಕ್ ಆಪರೇಟರ್, 2ನೇ ದರ್ಜೆ ಟೈಲರ್) | ರೂ. **191.12** ರಿಂದ ರೂ. **251.53** (ತಿಂಗಳಿಗೆ **6539.78**) |
| 3. ಕುಶಲ (1ನೇ ದರ್ಜೆ ಟೈಲರ್, ಚೆಕರ್) | ರೂ. **193.52** ರಿಂದ ರೂ. **254.53** (ತಿಂಗಳಿಗೆ **6617.78**) |
| 4. ಅತಿಕುಶಲ (ಟೈಲರ್) | ರೂ. **194.02** ರಿಂದ ರೂ. **262.53** (ತಿಂಗಳಿಗೆ **6825.78**) |

## ಸುದ್ದಿ ಚಿತ್ರಗಳು




ತರಬೇತಿ ಕಾರ್ಯಕ್ರಮದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು




ಅಡಿಡಾಸ್ ಬ್ರಾಂಡ್ ವಿರುದ್ಧ ಪ್ರತಿಭಟನೆ




GATWU ವೆಬ್ ಸೈಟ್ ಉದ್ಘಾಟನಾ ಸಮಾರಂಭ




ಎನ್.ಟಿ.ಯು.ಐ ಸಮಾವೇಶದಲ್ಲಿ GATWU ಕಾರ್ಮಿಕರು



ಮಹಿಳಾ ಕಾರ್ಮಿಕರಿಗೆ ಆರೋಗ್ಯ ಶಿಬಿರ




ಎನ್.ಟಿ.ಯು.ಐ ಸಮಾವೇಶದಲ್ಲಿ GATWU ಕಾರ್ಮಿಕರು



ಮಹಿಳಾ ದಿನಾಚರಣೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಣಿಪುರದ ಹೋರಾಟಗಾರ್ತಿಯರೊಂದಿಗೆ ನಾವು.




ಎನ್.ಟಿ.ಯು.ಐ ಸಮಾವೇಶದಲ್ಲಿ GATWU ಕಾರ್ಮಿಕರು



ಮದ್ದೂರಿನಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು

## ಕಾರ್ಮಿಕರಲ್ಲಿ ಮನವಿ

ಆತ್ಮೀಯರೇ, ಇದು ನಿಮ್ಮ ಪತ್ರಿಕೆ, ನೀವು ಹಣ ನೀಡಿ ಕೊಂಡು ಓದಿದರೇ ಈ ಪತ್ರಿಕೆ ಮುಂದುವರೆಯಲು ಸಾಧ್ಯವಾಗುತ್ತದೆ. ಕಾರ್ಮಿಕರಿಗಾಗಿ ಇರುವ ಪತ್ರಿಕೆಯನ್ನು ಕಾರ್ಮಿಕರೇ ಉಳಿಸಬೇಕು. ಆದ್ದರಿಂದ ದಯವಿಟ್ಟು ಪತ್ರಿಕೆಯನ್ನು ದುಡ್ಡು ಕೊಟ್ಟು ಖರೀದಿಸಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.

*–ಸಂ.ಮಂ.*



## ಆರೋಗ್ಯ ಭಾಗ್ಯ

'ಸೂಜಿದಾರ'ದಲ್ಲಿ ಖ್ಯಾತ ವೈದ್ಯರಾದ ಡಾ. ವಸುಂಧರಾ ಭೂಪತಿಯವರು ಸಾಮಾನ್ಯ ಆರೋಗ್ಯ ತೊಂದರೆಗಳಿಗೆ ಸುಲಭವಾಗಿ ಮಾಡಬಹುದಾದ ಮನೆಮದ್ದುಗಳನ್ನು ಕುರಿತು ಬರೆಯುತ್ತಿದ್ದಾರೆ.

**ಬೆನ್ನು ನೋವು**

- ಶುಂಠಿ ಕಷಾಯ ತಯಾರಿಸಿ ಅದಕ್ಕೆ ಹಾಲು, ಬೆಲ್ಲ ಸೇರಿಸಿ ಕುಡಿಯಬೇಕು.
- ಸೊಗದೆ ಬೇರಿನ ಚೂರ್ಣವನ್ನು ಒಂದು ಚಮಚೆ ತೆಗೆದುಕೊಂಡು ಒಂದು ಲೋಟ ನೀರಿನಲ್ಲಿ ಕುದಿಸಿ, ಅರ್ಧಭಾಗ ಉಳಿದಾಗ ಇಳಿಸಿ, ಶೋಧಿಸಿ, ಅದಕ್ಕೆ ನಿಂಬೆರಸ ಬೆರೆಸಿ ಕುಡಿಯಬೇಕು.
- ಶುಂಠಿ, ಮೆಣಸು, ಹಿಪ್ಪಲಿ, ಬೆಲ್ಲ, ನೆಗ್ಗಿಲುಮುಳ್ಳು, ಕೊಬ್ಬರಿ ಎಲ್ಲವನ್ನು ಸೇರಿಸಿ ಕುಟ್ಟಿಪುಡಿ ಮಾಡಿಟ್ಟುಕೊಳ್ಳಬೇಕು. ಒಂದು ಚಮಚೆಯಷ್ಟು ಪುಡಿಯನ್ನು ದಿನಕ್ಕೆರಡು ಬಾರಿ ಎರಡರಿಂದ ಮೂರುವಾರ ಸೇವಿಸಬೇಕು.
- ಅಶ್ವಗಂಧವನ್ನು ಹಾಲಿನಲ್ಲಿ ಬೇಯಿಸಿ, ಒಣಗಿಸಿ, ಪುಡಿ ಮಾಡಿ ಒಂದು ಚಮಚೆ ಪುಡಿಯನ್ನು ಜೇನುತುಪ್ಪದೊಂದಿಗೆ ಹಾಲಿನನೊಂದಿಗೆ ಸೇವಿಸಬೇಕು.
- ಬ್ರಾಹ್ಮಿ ಎಲೆಯನ್ನು ಒಣಗಿಸಿ ಮಾಡಿದ ಪುಡಿಯನ್ನು ಒಂದು ಚಮಚೆ ತೆಗೆದುಕೊಂಡು ಅದಕ್ಕೆ ಜೇನು ಬೆರೆಸಿ ಸೇವಿಸಬೇಕು.
- ಆಹಾರದಲ್ಲಿ ಮೆಂತ್ಯ ಸೊಪ್ಪು ಬಳಕೆ ಹೆಚ್ಚಿರಲಿ.
- ತುಂಬೆಯ ರಸ ಮತ್ತು ಜೇನು ತುಪ್ಪ ಬೆರೆಸಿ ಕುಡಿಯಬೇಕು.
- ಅಮೃತ ಬಳ್ಳಿಯ ಪುಡಿ ಮತ್ತು ಕಾಳು ಮೆಣಸಿನ ಪುಡಿ (ಅರ್ಧ ಚಮಚೆ) ತೆಗೆದುಕೊಂಡು ಕಷಾಯ ತಯಾರಿಸಿ ದಿನಕ್ಕೆರಡು ಬಾರಿ ಕುಡಿಯಬೇಕು.

**ಬಾಹ್ಯ ಚಿಕಿತ್ಸೆ :**

- 50 ಮೀ.ಲಿ ಎಳ್ಳೆಣ್ಣೆ, 5ಗ್ರಾಂ ಪಚ್ಚ ಕರ್ಪೂರ ಮತ್ತು 4ಬೆಳ್ಳುಳ್ಳಿ ಎಸಳುನ್ನು ಜಜ್ಜಿ ಹಾಕಿ ಕುದಿಸಿ, ತುಸು ಬೆಚ್ಚಗಿರುವಾಗ ನೋವಿರುವ ಭಾಗಕ್ಕೆ ಹಚ್ಚಿ ಮೃದುವಾದಿ ಮಸಾಜ್ ಮಾಡಬೇಕು.
- ತುಂಬೆ ಸೊಪ್ಪನ್ನು ಹರಳೆಣ್ಣೆ ಇಲ್ಲವೆ ಎಳ್ಳೆಣ್ಣೆಯಲ್ಲಿ ಅರೆದು ಲೇಪಿಸಬೇಕು.
- ಸಾಸುವೆ ಎಣ್ಣೆ, ಬೇವಿನ ಎಣ್ಣೆ, ಹರಳೆಣ್ಣೆ, ಕೊಬ್ಬರಿ ಎಣ್ಣೆಯನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಅದಕ್ಕೆ ಜೀರಿಗೆ, ಮೆಂತ್ಯ ಮತ್ತು ಬಜೆಯ ಸಮಭಾಗ ಪುಡಿ ಹಾಕಿ ಕಾಯಿಸಬೇಕು. ತಣ್ಣಗಾದ ಮೇಲೆ ಈ ಎಣ್ಣೆಯನ್ನು ನೋವಿರುವ ಜಾಗಕ್ಕೆ ಪದೇ ಪದೇ ಹಚ್ಚುತ್ತಿರಬೇಕು.



## ಚೆಂದವಿದೆಯಾ ನನ್ನ ಮುಖ?

ಉದ್ದ ತುಂಡು ಹಸಿವು  
ಗಿಡ್ಡ ತುಂಡು ಕನಸು  
ಜೋಡಿಸುವ ನನ್ನ ಬೆರಳು,  
ಕಡಿದು ಸೇರೋ ದಾರ  
ಕರ್ರ ಕರ್ರ ಹೊಲೆವ ಯಂತ್ರ  
ನನ್ನದಲ್ಲ.  
ತುಂಬೋ ರಂಗಿನ ಡಬ್ಬಿ

ಬೆಳಗುವ ಶೋಕೇಸೂ  
ನನ್ನ ಮುಖ ತೋರೋಲ್ಲ  
ರೀ.. ಬಹು ವಂದನೀಯ ಮಾನ್ಯರೇ  
ನೀವು ತೊಡುವ ಉಡುಗೆಯನ್ನು  
ಚೂರು ನೋಡಿ ಹೇಳಿ:  
ಚಂದವಿದೆಯಾ ನನ್ನ ಮುಖ?

■ **ಕೆ. ಫಣಿರಾಜ್,** ಸಿವಿಲ್ ಇಂಜಿನಿಯರ್, ಉಡುಪಿ,

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**  
ನಂ. 376/ಹೆಚ್ ಮೊದಲನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039.  
ಶನಿವಾರ ಸಂಜೆ 5–30ರ ನಂತರ ಹಾಗೂ ಭಾನುವಾರ ಬೆಳಿಗ್ಗೆ 10–30ರ ನಂತರ  
ಮೊ: 9686229761, 9901290495

### ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**  
ನಂ. 17/1, ಹೊಸ ಗುಡ್ಡದಹಳ್ಳಿ ಬಸ್‌ಸ್ಟಾಪ್ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು–26. ದೂ: 080–26745242  
* * *  
ನಂ.13. ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂಗಳೂರು–560073

2. **ಕರ್ನಾಟಕ ಮಹಿಳಾ ಆಯೋಗ**  
ನಂ. 105, ಮೊದಲನೇ ಮಹಡಿ  
ಕರ್ನಾಟಕ ಗೃಹ ಮಂಡಳಿ ಕಟ್ಟಡ  
ಕಾವೇರಿಭವನ, ಕೆ.ಜಿ.ರಸ್ತೆ,  
ಬೆಂಗಳೂರು–560 009  
ದೂ.: 22216485

3. **ವಿಮೋಚನಾ**  
ನಂ, 33/1–9, ತ್ಯಾಗರಾಜ ಬಡಾವಣೆ  
ಜೈಭಾರತನಗರ, ಮಾರುತಿ ಸೇವಾನಗರ  
ಬೆಂಗಳೂರು–560 038  
ದೂ.: 25492781

4. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**  
ನ್ಯಾಯ ದೇಗುಲ  
ಎಚ್. ಸಿದ್ದಯ್ಯ ರಸ್ತೆ  
ಬೆಂಗಳೂರು–27

### ನಾಯಂಡಹಳ್ಳಿಯಲ್ಲಿ ಉಚಿತ ಲೈಬ್ರರಿ

**ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಹಾಗೂ ಅವರ ಮಕ್ಕಳಿಗಾಗಿ ಗಾ.ಮ.ಕ. ಮುನ್ನಡೆಯ ನಾಯಂಡಹಳ್ಳಿ ಕಛೇರಿಯಲ್ಲಿ ಲೈಬ್ರರಿ ವ್ಯವಸ್ಥೆ ಇದ್ದು, ಆಸಕ್ತರು ಇದರ ಉಪಯೋಗವನ್ನು ಪಡೆಯಬಹುದು.**  
**ಸಮಯ: ಮಂಗಳವಾರದಿಂದ ಶನಿವಾರ: ಸಂಜೆ 4 ರಿಂದ 7ರ ವರೆಗೆ, ಭಾನುವಾರ: ಬೆಳಿಗ್ಗೆ 10ರಿಂದ 2ರ ವರೆಗೆ**

ಸಂಪಾದಕ ಮಂಡಳಿ–ಪ್ರಕಾಶಕರು : **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ,** ನಂ. 376/H, ಮೊದಲನೇ ಮಹಡಿ, ಗಣೇಶ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039. । ಮುದ್ರಣ : **ಇಳಾ ಮುದ್ರಣ,** ಬೆಂಗಳೂರು – 560 026. ದೂ. : 26757159